# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ಚೌಕ, ಬೆಂಗಳೂರು-560 002**

**ಪತ್ರಿಕಾ ಪ್ರಕಟಣೆ** **ದಿನಾಂಕ: 08.08.2019**

## ಪೂಜ್ಯ ಮಹಾಪೌರರು ರವರಿಂದ "ಪಿಂಕ್ ಬೇಬಿ" ಯೋಜನೆ ಫಲಾನುಭವಿಗಳಿಗೆ 5 ಲಕ್ಷ ರೂ. ಬಾಂಡ್ ವಿತರಣಾ ಕಾರ್ಯಕ್ರಮ:



ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ 24 ಹೆರಿಗೆ ಆಸ್ಪತ್ರೆಗಳಲ್ಲಿ ಜನಿಸಿದ ಮೊದಲ ಹೆಣ್ಣುಮಗುವಿಗೆ 5 ಲಕ್ಷ ರೂ. ನೀಡುವ "ಪಿಂಕ್ ಬೇಬಿ" ಯೋಜನೆಯಡಿ ಗುರುವಾರ ಪೂಜ್ಯ ಮಹಾಪೌರರು ರವರ ಕೊಠಡಿಯಲ್ಲಿ 19 ಫಲಾನುಭವಿಗಳಿಗೆ ಪೂಜ್ಯ ಮಹಾಪೌರರು ರವರು ಬಾಂಡ್ ವಿತರಣೆ ಮಾಡಿದರು. ಈ ವೇಳೆ ಮಾನ್ಯ ಉಪಮಹಾಪೌರರು, ಮಾನ್ಯ ಆಡಳಿತ ಪಕ್ಷದ ನಾಯಕರು, ಮಾಜಿ ಮಹಾಪೌರರುಗಳಾದ ಮಾನ್ಯ ಮಂಜುನಾಥ್ ರೆಡ್ಡಿ ರವರು ಹಾಗೂ ಬಿ.ಎಸ್.ಸತ್ಯನಾರಾಯಣ ರವರು, ಪಾಲಿಕೆ ಸದಸ್ಯರು, ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿಗಳು(ಕ್ಲೀನಿಕಲ್), ವೈದ್ಯರು ಹಾಗೂ ಇತರೆ ಅಧಿಕಾರಿಗಳು ಇದ್ದರು.

ಬಿಬಿಎಂಪಿ ವ್ಯಾಪ್ತಿಗೆ ಒಳಪಡುವ 19 ಹೆರಿಗೆ ಆಸ್ಪತ್ರೆಗಳಲ್ಲಿ ಜನಿಸಿದ ಮೊದಲ ಹೆಣ್ಣುಮಗುವಿನ ಪೋಷಕರಿಗೆ "ಪಿಂಕ್ ಬೇಬಿ" ಯೋಜನೆಯಡಿ ತಲಾ 5 ಲಕ್ಷ ರೂ. ಬಾಂಡ್ ಅನ್ನು ಮಹಾಪೌರರು ವಿತರಣೆ ಮಾಡಿದರು.

ಬಾಂಡ್ ವಿತರಣೆ ಮಾಡಿದ ಬಳಿಕ ಮಾತನಾಡಿದ ಮಹಾಪೌರರು, 2018ನೇ ಸಾಲಿನಲ್ಲಿ ವರ್ಷದ ಮೊದಲನೇ ದಿನ ಹುಟ್ಟಿದ ಒಂದು ಹೆಣ್ಣು ಮಗುವಿಗೆ 5 ಲಕ್ಷ ರೂಪಾಯಿ ಬಾಂಡ್ ವಿತರಿಸಲಾಗಿತ್ತು. ಬಳಿಕ 2019ನೆ ಸಾಲಿನಲ್ಲಿ ಪಾಲಿಕೆ ವ್ಯಾಪ್ತಿಗೆ ಒಳಪಡುವ 24 ಆಸ್ಪತ್ರೆಗಳಲ್ಲಿ ಹುಟ್ಟುವ ಮೊದಲ ಹೆಣ್ಣು ಮಗುವಿಗೆ ಈ ಸೌಲಭ್ಯ ಸಿಗಬೇಕೆಂಬ ಉದ್ದೇಶದಿಂದ ಬಜೆಟ್‌ನಲ್ಲಿ 1.20 ಕೋಟಿ ರೂ. ಮೀಸಲಿರಿಸಲಾಯಿತು.

ಪಾಲಿಕೆ ವ್ಯಾಪ್ತಿಯ 24 ಆಸ್ಪತ್ರೆಗಳ ಪೈಕಿ ಕಾವೇರಿಪುರ, ದಾಸಪ್ಪ ಹಾಗೂ ಯಶವಂತಪುರ ಹೆರಿಗೆ ಆಸ್ಪತ್ರೆಗಳನ್ನು ಪುನರ್ ನವೀಕರಣ ಮಾಡಲಾಗುತ್ತಿದೆ. ವಿಲ್ಸನ್ ಗಾರ್ಡನ್ ಹೆರಿಗೆ ಆಸ್ಪತೆಯಲ್ಲಿ ಹೊರರಾಜ್ಯದ ಮಗು ಜನಿಸಿದ್ದು ಈ ಯೋಜನೆ ಅನ್ವಯವಾಗುವುದಿಲ್ಲ. ಮೂಡಲ ಪಾಳ್ಯ ಆಸ್ಪತ್ರೆಯಲ್ಲಿ ಜನಿಸಿದ ಮಗುವಿನ ದಾಖಲಾತಿಗಳನ್ನು ಪಾಲಿಕೆಗೆ ಸಲ್ಲಿಸದ ಪರಿಣಾಮ ಇಂದು 19 ಆಸ್ಪತ್ರೆಗಳಲ್ಲಿ ಜನಿಸಿದ ಮೊದಲ ಹೆಣ್ಣು ಮುಗುವಿಗೆ ಬಾಂಡ್ ವಿತರಣೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಪ್ರತಿಯೊಬ್ಬ ಹೆಣ್ಣು ಮಗುವಿಗೂ ಶಿಕ್ಷಣ ಸಿಗಬೇಕು ಹಾಗೂ ಹೆಣ್ಣು ಭ್ರೂಣ ಹತ್ಯೆ ನಿಯಂತ್ರಣವಾಗಬೇಕು ಎಂಬ ಉದ್ದೇಶದಿಂದ ಪಿಂಕ್ ಬೇಬಿ ಯೋಜನೆಯಡಿ 5 ಲಕ್ಷ ರೂ. ರೂಪಾಯಿಗಳನ್ನು ಬ್ಯಾಂಕ್‌ನಲ್ಲಿ ಠೇವಣಿ ರೂಪದಲ್ಲಿ ಇಡಲಾಗುತ್ತದೆ. ಠೇವಣಿಯಿಂದ ಬರುವ ಬಡ್ಡಿ ಹಣವನ್ನು ಮಗುವಿನ ವಿದ್ಯಾಭ್ಯಾಸಕ್ಕೆ ಉಪಯೋಗಿಸಬಹುದು. 18 ವರ್ಷ ತುಂಬಿದ ಬಳಿಕ ಹೆಚ್ಚಿನ ವಿದ್ಯಾಭ್ಯಾಸ ಮಾಡಲು ಬಯಸಿದಲ್ಲಿ ಯೋಜನೆಯಡಿ ಇಟ್ಟಿರುವ ಸಂಪೂರ್ಣ ಠೇವಣಿ ಮೊತ್ತವನ್ನು ಪೋಷಕರ ಖಾತೆಗೆ ವರ್ಗಾಯಿಸಲಾಗುವುದು. ಒಂದು ವೇಳೆ ಮಗುವಿಗೆ ಶಿಕ್ಷಣ ಪಡೆಯದ ಪಕ್ಷದಲ್ಲಿ ಮಗುವಿಗೆ ಮೀಸಲಿಟ್ಟಿರುವ ಠೇವಣಿ ಹಣವನ್ನು ಪಾಲಿಕೆ ಖಾತೆಗೆ ಹಿಂಪಡೆಯಲಾಗುತ್ತದೆ ಎಂದು ಮಹಾಪೌರರು ಸ್ಪಷ್ಟಪಡಿಸಿದರು.

**ಮಗು ಜನಿಸಿದ ಆಸ್ಪತ್ರೆಗಳ ಪಟ್ಟಿ:**

1. ಪಬ್ಬತ್ತಿ ಹೆರಿಗೆ ಆಸ್ಪತ್ರೆ
2. ಜಯನಗರ ಹೆರಿಗೆ ಆಸ್ಪತ್ರೆ
3. ಗಂಗಾನಗರ ಹೆರಿಗೆ ಆಸ್ಪತ್ರೆ
4. ಮುನಿರೆಡ್ಡಿ ಪಾಳ್ಯ ಹೆರಿಗೆ ಆಸ್ಪತ್ರೆ
5. ಮನವರ್ತಪೇಟ್ ಹೆರಿಗೆ ಆಸ್ಪತ್ರೆ
6. ಕಾಟನ್ ಪೇಟ್ ಹೆರಿಗೆ ಆಸ್ಪತ್ರೆ
7. ಡಿ.ಜಿ.ಹಳ್ಳಿ ಹೆರಿಗೆ ಆಸ್ಪತ್ರೆ
8. ಕಾಕ್ಸ್‌ಟೌನ್ ಹೆರಿಗೆ ಆಸ್ಪತ್ರೆ
9. ತಿಮ್ಮಯ್ಯ ರಸ್ತೆ ಹೆರಿಗೆ ಆಸ್ಪತ್ರೆ
10. ಪ್ಯಾಲೆಸ್ ಗುಟ್ಟಹಳ್ಳಿ ಹೆರಿಗೆ ಆಸ್ಪತ್ರೆ
11. ಆಸ್ಟಿನ್ ಟೌನ್ ಹೆರಿಗೆ ಆಸ್ಪತ್ರೆ
12. ಶಾಂತಿನಗರ ಹೆರಿಗೆ ಆಸ್ಪತ್ರೆ
13. ಮಾಗಡಿ ರಸ್ತೆ ಹೆರಿಗೆ ಆಸ್ಪತ್ರೆ
14. ಅಜಾದ್ ನಗರ ಹೆರಿಗೆ ಆಸ್ಪತ್ರೆ

15. ಸಿರಿಸಿ ರಸ್ತೆ ಹೆರಿಗೆ ಆಸ್ಪತ್ರೆ
16. ರಾಜಾಜಿನಗರ ಹೆರಿಗೆ ಆಸ್ಪತ್ರೆ
17. ನಂದಿನಿ ಲೇಔಟ್ ಹೆರಿಗೆ ಆಸ್ಪತ್ರೆ
18. ಎನ್.ಆರ್. ಕಾಲೋನಿ ಹೆರಿಗೆ ಆಸ್ಪತ್ರೆ
19. ಗವಿಪುರ ಹೆರಿಗೆ ಆಸ್ಪತ್ರೆ

**ವಿಷಯವನ್ನು ತಮ್ಮ ಮಾಧ್ಯಮದಲ್ಲಿ ಪ್ರಕಟಿಸಲು ಕೋರಿದೆ.**

**ಸಾರ್ವಜನಿಕ ಸಂಪರ್ಕಾಧಿಕಾರಿ**